## 4:7-9

# ಸಲಹಾಸೂಚನೆಗಳು ಮತ್ತು ಶಿಫಾರಸ್ಸುಗಳು

ಪೌಲನು ಸಭೆಗಳಿಗೆ ಬರೆದ ತನ್ನ ಪತ್ರಿಕೆಗಳಲ್ಲಿ, ಅಂತಿಮ ಸಲಹಾಸೂಚನೆಗಳನ್ನು ಮತ್ತು ಕೆಲವು ಸಾರಿ ತನ್ನ ಜೊತೆ ಕೆಲಸಗಾರರು ಹೇಳುವ ವಂದನೆಗಳನ್ನು ತಿಳಿಸುವ ಮೂಲಕ ಮುಕ್ತಾಯಗೊಳಿಸುತ್ತಿದ್ದನು. ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯು ಆತನೊಂದಿಗೆ ಇರುವವರ ಕುರಿತು ಸಹಜವಾಗಿರುತ್ತಿದ್ದ ಸಂಗತಿಗಳಿಗಿಂತಲೂ ಹೆಚ್ಚು ವೈಯಕ್ತಿಕವಾದ ಹೆಸರುಗಳನ್ನು ಮತ್ತು ಶಿಫಾರಸ್ಸುಗಳನ್ನು ಒಳಗೊಂಡಿರುತ್ತದೆ. ಪೌಲನು ತನ್ನ ಪತ್ರಿಕೆಯನ್ನು ಕೊಂಡೊಯ್ಯುವವರು ಮತ್ತು ಆತನ ವೈಯಕ್ತಿಕ ಸಂದೇಶವಾಹಕರಾಗಿದ್ದ, ತುಖಿಕ ಹಾಗೂ ಒನೇಸಿಮರನ್ನು ಮೊದಲು ಹೆಸರಿಸುತ್ತಾರೆ ಮತ್ತು ನಂತರ ಅವರನ್ನು ಶಿಫಾರಸ್ಸು ಮಾಡುತ್ತಾನೆ (ವಚನಗಳು 7-9). ಬಳಿಕ ಆತನು ಕೊಲೊಸ್ಸೆಯಲ್ಲಿರುವ ಸಹೋದರರಿಗೆ ವಂದನೆಗಳನ್ನು ತಿಳಿಸಿದ ಆರು ಜನ ಸಂಗಡಿಗರ ಪಟ್ಟಿಯನ್ನು ಮಾಡುತ್ತಾನೆ (ವಚನಗಳು 10-14). ಆತನು ಲವೊದಿಕೀಯದಲ್ಲಿರುವ ಸಭೆಗೆ ವಂದನೆಗಳನ್ನು ಹೇಳುತ್ತಾನೆ, ನಂತರ ನುಂಫಳಿಗೆ ಮತ್ತು ಆಕೆಯ ಮನೆಯಲ್ಲಿ ಕೂಡಿಬರುತ್ತಿದ್ದ ಸಭೆಗೆ ವಂದನೆಗಳನ್ನು ತಿಳಿಸುತ್ತಾನೆ, ಅದಾದ ನಂತರ ಅರ್ಖಿಪ್ಪನಿಗೆ ಬುದ್ಧಿವಾದವನ್ನು ಹೇಳುತ್ತಾನೆ (ವಚನಗಳು 15-17). ಪೌಲನು ಕೊಲೊಸ್ಸೆಯವರಿಗೆ ವೈಯಕ್ತಿಕವಾಗಿ ವಂದನೆಗಳನ್ನು ಹೇಳುವ ಮೂಲಕ ಪತ್ರಿಕೆಯನ್ನು ಅಂತ್ಯಗೊಳಿಸುತ್ತಾನೆ (ವ. 18).

ಪೌಲನು ತನ್ನನ್ನಾಗಲಿ ಮತ್ತು ತನ್ನ ಸಂಗಡಿಗರನ್ನಾಗಲಿ ಉನ್ನತದಲ್ಲಿರುವ ನಾಯಕರು ಅಥವಾ ಸರ್ವೋಚ್ಚ ಸ್ಥಾನದಲ್ಲಿರುವವರಾಗಿದ್ದು ಇತರ ಕ್ರೈಸ್ತರಿಗಿಂತಲೂ ಹೆಚ್ಚು ಪರಿಶುದ್ಧ ವರ್ಗದಲ್ಲಿರುವವರಂತೆ ಘನತೆ ಮತ್ತು ಮರ್ಯಾದೆಯನ್ನು ಹೊಂದತಕ್ಕವರೆಂಬದಾಗಿ ವರ್ಣಿಸಿಕೊಳ್ಳಲಿಲ್ಲ. ಯೇಸು ಮನುಷ್ಯರನ್ನು ಉನ್ನತ್ತಕ್ಕೇರಿಸುವದರ ವಿರುದ್ಧವಾಗಿ ಮಾತಾಡಿದನು (ಮತ್ತಾಯ 23:6-12). ಬೇರೆಯವರಿಗೆ ಸೇವೆ ಮಾಡುವವರೇ ತನ್ನ ಶಿಷ್ಯರಲ್ಲಿ ಎಲ್ಲರಿಗಿಂತಲೂ ದೊಡ್ಡವರು ಎಂದು ಆತನು ಹೇಳಿದನು. ಪೌಲನು ತನ್ನೊಂದಿಗೆ ಪ್ರಯಾಸ ಪಟ್ಟವರನ್ನು ನಂಬಿಗಸ್ತ ಸೇವಕರು, ದಾಸರು, ಮತ್ತು ಜೀತದಾಳು ಎಂದು ಬಣ್ಣಿಸಿದನು (1:7; 4:7, 12). ಇದು ಪೌಲನು ತನ್ನ ಜೊತೆ ಕೆಲಸಗಾರರ ಕುರಿತಾಗಿ ಮತ್ತು ಸ್ವತಃ ತನ್ನ ಕುರಿತಾಗಿ ಯಾವ ಮನೋಭಾವ ಇಟ್ಟುಕೊಂಡಿದ್ದನೆಂಬುದನ್ನು

ತೋರ್ಪಡಿಸುತ್ತದೆ. ಆತನು ಅವರನ್ನು "ಜೊತೆ" ಎಂದು ಕರೆಯುವ ಮೂಲಕ ಆ ದೇವರ ಸೇವಕರೊಂದಿಗೆ ತನ್ನನ್ನು ಗುರುತಿಸಿಕೊಂಡನು; ಆತನು ತನ್ನ ಹೆಸರಿಗೆ ಒಂದು ವಿಶೇಷ ಬಿರುದು ಸೇರಿಸಿಕೊಳ್ಳಲಿಲ್ಲ ಅಥವಾ ಅವರಿಗಿಂತ ಉಚ್ಚಸ್ಥಾನದಲ್ಲಿರುವೆನೆಂದು ಹೇಳಿಕೊಳ್ಳಲಿಲ್ಲ.

## ತುಖಿಕನಿಗೆ ಸಂಬಂಧಿಸಿದ್ದು (4:7, 8)

**7ಪ್ರಿಯ ಸಹೋದರನೂ ನಂಬಿಗಸ್ತನಾದ ಸೇವಕನೂ ಕರ್ತನಲ್ಲಿ ಜೊತೆಯ ದಾಸನೂ ಆಗಿರುವ ತುಖಿಕನು ನನ್ನ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು. 8ನೀವು ನನ್ನ ಸಮಾಚಾರವನ್ನು ತಿಳುಕೊಳ್ಳುವ ಹಾಗೆಯೂ ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ ನಂಬಿಗಸ್ತನಾದ.**

### "ಪ್ರಿಯ ಸಹೋದರನೂ ನಂಬಿಗಸ್ತನಾದ ಸೇವಕನೂ ಕರ್ತನಲ್ಲಿ ಜೊತೆಯ ದಾಸನೂ ಆಗಿರುವ ತುಖಿಕನು ನನ್ನ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು" (4:7)

ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ತಲುಪಿಸುವದಕ್ಕಾಗಿ ಇಬ್ಬರು ಸಂದೇಶವಾಹಕರನ್ನು ಆರಿಸಿಕೊಳ್ಳಲಾಗಿತ್ತು – ಒಬ್ಬ ಸ್ವತಂತ್ರನಾದ **ತುಖಿಕ**, ಮತ್ತು ಒಬ್ಬ ದಾಸನಾಗಿದ್ದ, ಒನೇಸಿಮ. ಒಬ್ಬನು ಏಕಾಂಗಿಯಾಗಿ ಪ್ರಯಾಣಿಸುವದಕ್ಕಿಂತಲೂ ಇಬ್ಬರು ಇದ್ದರೆ ಹೆಚ್ಚಾದ ಸುರಕ್ಷತೆಯಿರುವದು. ಅಲ್ಲದೆ, ಪೌಲನ ಪರಿಸ್ಥಿತಿಯ ಕುರಿತು ಹೆಚ್ಚು ಸಂಪೂರ್ಣವಾದ ವಿವರವನ್ನು ಕೊಡುವದಕ್ಕೆ ಇಬ್ಬರಿಂದ ಸಾಧ್ಯವಾಗಬಹುದಾಗಿತ್ತು. ಅವರ ಹಾಗೂ ಆತನ ನಡುವೆಯಿದ್ದ ಪರಸ್ಪರ ಪ್ರೀತಿಯ ಬಂಧವು ಪೌಲನ ಕುರಿತ ಸುದ್ದಿಯನ್ನು ಹೊತ್ತೊಯ್ಯುವದಕ್ಕೆ ಇವರಿಬ್ಬರನ್ನೂ ಉತ್ತಮ ಸಂದೇಶವಾಹಕರನ್ನಾಗಿಸಿತ್ತು.

ತುಖಿಕ, ಎಂದರೆ "ಆಕಸ್ಮಿಕ" ಅಥವಾ "ಅದೃಷ್ಟವಶವಾದ" ಎಂದರ್ಥವಾಗಿದ್ದು, ಆತನು ಪೌಲನು ಅಷ್ಟಾಗಿ ಪರಿಚಿತವಲ್ಲದ ಸಂಗಡಿಗನು ಮತ್ತು ಆಸ್ಯಸೀಮೆಗೆ ಸೇರಿದವನಾಗಿದ್ದನು. ಲೂಕನು ಮೊದಲು ಆತನನ್ನು ಅಪೊಸ್ತಲರ ಕೃತ್ಯಗಳು 20:4ರಲ್ಲಿ ಉಲ್ಲೇಖಿಸುತ್ತಾನೆ ಆದರೆ ಆತನು ಎಲ್ಲಿ ಮತ್ತು ಹೇಗೆ ಪೌಲನಿಗೆ ಜೊತೆಯಾದನೆಂಬದರ ಕುರಿತು ತಿಳಿಯಪಡಿಸಲಿಲ್ಲ. ತೋರುವ ಪ್ರಕಾರ, ಪೌಲನು ತನ್ನ ಮೂರನೆಯ ಸುವಾರ್ತಾ ಪ್ರಯಾಣದ ವೇಳೆ ಮಕೆದೋನ್ಯದ ಮೂಲಕ ಹಿಂದಿರುಗಿ ಬರುವ ವೇಳೆ ಆತನು ಪೌಲನೊಂದಿಗಿದ್ದನು. ಆತನು ಪೌಲ ಮತ್ತು ಲೂಕನಿಗಿಂತ ಮುಂದಾಗಿ ಸೋಪತ್ರ, ಅರಿಸ್ತಾರ್ಕ, ಸೆಕುಂದ, ಗಾಯ, ಮತ್ತು ತಿಮೊಥೆಯರ ಸಂಗಡ ಆಸ್ಯಸೀಮೆಯಲ್ಲಿರುವ ತ್ರೋವಕ್ಕೆ ಪ್ರಯಾಣಿಸಿದ್ದನು. ತನ್ನ ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ಮಕೆದೋನ್ಯದ ಮೂಲಕವಾಗಿ ಪ್ರಯಾಣಿಸಿದ ಬಳಿಕ, ಪಂಚಾಶತ್ತಮ ದಿನದ ಮುಂಚೆ ಯೆರೂಸಲೇಮ್ ತಲುಪಬೇಕೆಂದು ತೀರ್ಮಾನಿಸಿಕೊಂಡವನಾಗಿ (ಅಪೊಸ್ತಲರ ಕೃತ್ಯಗಳು 20:16), ಪೌಲನು ಯೆರೂಸಲೇಮಿನಲ್ಲಿದ್ದ ಸಭೆಗೆ ಕಾಣಿಕೆಗಳನ್ನು ಒಪ್ಪಿಸುವದಕ್ಕೆ ತನ್ನೊಂದಿಗೆ ತುಖಿಕ ಹಾಗೂ ಇನ್ನಿತರರನ್ನು ಕರೆದುಕೊಂಡು ಹೋದನು. ಪೌಲನು ಯೆರೂಸಲೇಮಿನಲ್ಲಿದ್ದ ಬಡವರಿಗಾಗಿ ಸಂಗ್ರಹಿಸುತ್ತಿದ್ದ ಹಣದ ದೇಣಿಗೆಗಳನ್ನು ಕೊಂಡೊಯ್ಯುವದಕ್ಕೆ ತೀತನ ಜೊತೆಯಲ್ಲಿ

ಕಳುಹಿಸಲ್ಪಟ್ಟಿದ್ದಂಥ ಒಬ್ಬ ಅತ್ಯಂಥ ಗೌರವಾನ್ವಿತ ಸಹೋದರನು ಈತನಾಗಿದ್ದನೆಂಬದಾಗಿ ಕೆಲವು ವ್ಯಾಖ್ಯಾನಕಾರರು ಪರಿಗಣಿಸುತ್ತಾರೆ (ನೋಡಿರಿ 24:17; 1 ಕೊರಿಂಥ 16:3; 2 ಕೊರಿಂಥ 8:16-19).

ಪೌಲನು ಈ ಪತ್ರಿಕೆಯನ್ನು ಬರೆಯುವ ವೇಳೆ, ಆತನ ಮೊದಲ ಸೆರೆವಾಸದ ಸಮಯದಲ್ಲಿ ತುಖಿಕನು ರೋಮಾಪುರದಲ್ಲಿ ಆತನೊಂದಿಗಿದ್ದನು (ಎಫೆಸ 6:21). ಆತನ ಎರಡನೆಯ ಸೆರೆವಾಸದ ವೇಳೆಯಲ್ಲಿ ಸಹ ಆತನು ಪೌಲನ ಸಂಗಡ ಇದ್ದನು (2 ತಿಮೊಥೆ 4:12; ತೀತನಿಗೆ 3:12). ಪೌಲನ ಸಂಗಡ ಇರುವದಕ್ಕಾಗಿ ತುಖಿಕನು ಹೇಗೆ ರೋಮಾಪುರಕ್ಕೆ ಪ್ರಯಾಣಿಸಿದನೆಂಬುದನ್ನು ಲೂಕನು ತಿಳಿಸಲಿಲ್ಲ.

ತುಖಿಕನು ಪೌಲನಿಂದ ಬಹಳ ಗೌರವದಿಂದ ಕಾಣಲ್ಪಟ್ಟಿದ್ದನು, ಆತನು ತುಖಿಕನನ್ನು **ಪ್ರಿಯ ಸಹೋದರನೂ ನಂಬಿಗಸ್ತನಾದ ಸೇವಕನೂ ಜೊತೆಯ ದಾಸನೂ** ಮತ್ತು "ಪ್ರಿಯ ಸಹೋದರನೂ ನಂಬಿಗಸ್ತನಾದ ಸೇವಕನೂ" ಎಂದು ಕರೆದನು (ಎಫೆಸ 6:21). ಪೌಲನು ಅನೇಕ ಸಾರಿ ತನ್ನ ಜೊತೆ ಕ್ರೈಸ್ತರನ್ನು "ಸಹೋದರರು" ಎಂದು ಕರೆಯುತ್ತಿದ್ದನು (1:1, 2; 4:7, 9, 15; 1:1ರ ಮೇಲಿನ ಚರ್ಚೆಯನ್ನು ನೋಡಿರಿ).

ಈ ಪತ್ರಿಕೆಯಲ್ಲಿ ಪೌಲನು "ಪ್ರಿಯ" ಎಂಬದಾಗಿ ತುಖಿಕನನ್ನು ಸೂಚಿಸಿ ಬಳಸುತ್ತಾನೆ (4:7); ಇನ್ನು ನಾಲ್ವರನ್ನು ಸೂಚಿಸಿ ಬಳಸಿದನು – ಎಪಫ್ರ (1:7), ಒನೇಸಿಮ (4:9), ಮತ್ತು ಲೂಕ (4:14); ಮತ್ತು ಯೇಸು (1:13). ಕೆಲವು ಸಾರಿ ತಾವು ಬೇರೆಯವರಿಗಿಂತಲೂ ಹೆಚ್ಚು ಗಾಢವಾಗಿ ಪ್ರೀತಿಸುವ ನೆಚ್ಚಿನವರನ್ನಿಟ್ಟುಕೊಳ್ಳುವದು ತಪ್ಪೋ ಎಂಬದಾಗಿ ಕ್ರೈಸ್ತರು ಚಕಿತಗೊಳ್ಳುತ್ತಾರೆ. ಸ್ಪಷ್ಟವಾಗಿ ಕಾಣುವ ಪ್ರಕಾರ, ಪೌಲನಿಗೂ ನೆಚ್ಚಿನವರಿದ್ದರು, ಅಲ್ಲದೆ ನಮ್ಮ ಕರ್ತನು ಸಹ ಹೊಂದಿದ್ದನು. (ಇದು ಅಪೊಸ್ತಲನಾದ ಯೋಹಾನನ ಮೇಲೆ ಆತನು ಇಟ್ಟಿದ್ದ ಪ್ರೀತಿಯಲ್ಲಿ ಕಂಡು ಬರುತ್ತದೆ; ಯೋಹಾನ 20:2; 21:7, 20.)

ತುಖಿಕನು ಮಾತ್ರವೇ ಪೌಲನಿಂದ ಒಬ್ಬ "ನಂಬಿಗಸ್ತನಾದ ದಾಸಕ" (πιστὸς διάκονος, *pistos diakonos*) ಮತ್ತು "ನಂಬಿಗಸ್ತನಾದ ಸೇವಕ" (NIV) ಎಂದು ಕರೆಯಲ್ಪಟ್ಟವನಾಗಿದ್ದಾನೆ. "ನಂಬಿಗಸ್ತ" ಎಂದರೆ "ವಿಶ್ವಾಸಾರ್ಹ" ಮತ್ತು "ಸಮರ್ಪಣೆಯುಳ್ಳ" ಎಂದರ್ಥವಾಗಿದೆ.

ಒಬ್ಬ ನಂಬಿಗಸ್ತ ನಿಯೋಗಿಯಾಗಿ, ಪೌಲನ ಪತ್ರಿಕೆಯನ್ನು ಎಫೆಸಕ್ಕೆ ತಲುಪಿಸಬಲ್ಲನು ಎಂಬದಾಗಿ ಆತನಿಂದ ವಿಶ್ವಾಸಿಸಲ್ಪಟ್ಟಿದ್ದನು (ಎಫೆಸ 6:21). ಪೌಲನಿಗೆ ಆಧುನಿಕ ಅಂಚೆ ಸೇವೆಯ ಸೌಲಭ್ಯವು ಇರಲಿಲ್ಲ, ಆದ್ದರಿಂದ ಆತನು ತನ್ನ ಪತ್ರಿಕೆಗಳನ್ನು ಕೊಂಡೊಯ್ಯುವದಕ್ಕೆ ವಿಶ್ವಾಸಾರ್ಹರಾದ ವ್ಯಕ್ತಿಗಳನ್ನು ಅವಲಂಬಿಸಿದ್ದನು. ಸ್ವಲ್ಪ ಕಾಲದ ಬಳಿಕ, ಪೌಲನು ತುಖಿಕನನ್ನು ಎಫೆಸಕ್ಕೆ ಕಳುಹಿಸುತ್ತಾನೆ, ಬಹುಶಃ ಅಲ್ಲಿ ಸೇವೆಯನ್ನು ಮಾಡುತ್ತಿದ್ದ ತಿಮೊಥೆಯನನ್ನು ಬಿಟ್ಟು ಕಳುಹಿಸಲು ಅಥವಾ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಎಂದು ತೋರುತ್ತದೆ (2 ತಿಮೊಥೆ 4:12). ಅಲ್ಲದೆ ಪೌಲನು ಕ್ರೇತದ್ವೀಪದಲ್ಲಿ ಸೇವೆ ಮಾಡುತ್ತಿದ್ದ ತೀತನು ಪೌಲನ ಸಂಗಡ ಚಳಿಗಾಲವನ್ನು ಕಳೆಯುವದಕ್ಕೆ ನಿಕೊಪೊಲಿಗೆ ಹೋಗುವದಕ್ಕೆ ಸಾಧ್ಯವಾಗುವಂತೆ, ಆತನ ಬಿಟ್ಟು ಕಳುಹಿಸಿ ಆತನ ಸೇವೆಯನ್ನು ತುಖಿಕನು ಅಥವಾ ಅರ್ತೆಮ ಇಬ್ಬರಲ್ಲಿ ಒಬ್ಬರನ್ನು ಕಳುಹಿಸುವದಕ್ಕೆ ಯೋಜನೆ ಮಾಡಿದ್ದನು (ತೀತನಿಗೆ 3:12).

"ದಾಸನು" (διάκονος, *diakonos*) ಎಂಬುದನ್ನು "ಸೇವಕ" ಮತ್ತು "ಸಭಾಹಿರಿಯ" ಎಂದು ಅನುವಾದಿಸಬಹುದು. ಪೌಲನು ಇದನ್ನು ಸೇವೆಯ ತಾಂತ್ರಿಕ ಅರ್ಥದಲ್ಲಿ ಒಬ್ಬ ಸಭಾಹಿರಿಯನ ವಿಷಯವಾಗಿ ಮೂರು ಸಾರಿ ಬಳಸಿದನು (ಫಿಲಿಪ್ಪಿ 1:1; 1 ತಿಮೊಥೆ 3:8, 12). ಇಲ್ಲವಾದಲ್ಲಿ, ಅದು ಇಲ್ಲಿರುವ ಪ್ರಕಾರವೇ, ಸೇವಕರನ್ನು ಅಥವಾ ಸೇವೆ ಮಾಡುವವರನ್ನು ಸೂಚಿಸುವದಾಗಿದೆ. ಬಹುಶಃ ಪೌಲನು ತಾತ್ಪರ್ಯವು ಆತನಿಗೆ ಸೇವೆ ಮಾಡಲು ಒಪ್ಪಿಸಿದ ಯಾವದೇ ಕೆಲಸದಲ್ಲಿ ಆತನು ನಂಬಿಗಸ್ತನಾಗಿ ಸೇವೆ ಸಲ್ಲಿಸಿದನು ಎಂದಾಗಿರಬೇಕು.

ಪೌಲನು "ಜೀತದಾಳು" (συνδούλος, *sundoulos*) ಎಂಬುದನ್ನು ಎಪಫ್ರನಿಗೆ ಮತ್ತು ನಂತರ ತುಖಿಕನಿಗೆ ಅನ್ವಯಗೊಳಿಸಿದನು. ಇದೊಂದು ಸಂಯುಕ್ತ ಪದವಾಗಿದೆ: *sun*, "ಯೊಂದಿಗೆ," ಜೊತೆಗೆ *doulos*, "ದಾಸ." ಯೇಸು ಈ ಪದವನ್ನು ಬಳಸಿದನು (ನೋಡಿರಿ ಮತ್ತಾಯ 18:28; 24:49), ಅದೇ ರೀತಿ ಯೋಹಾನನು ಬಳಸಿದನು (ಪ್ರಕಟನೆ 6:11; 19:10; 22:9). ಪೌಲನು ತನ್ನನ್ನು ಯೇಸುವಿಗೆ ದಾಸನೆಂದು ಪರಿಗಣಿಸಿಕೊಂಡನು ಮತ್ತು ತುಖಿಕನನ್ನು ಕರ್ತನಲ್ಲಿ ತನ್ನ ಜೊತೆಯ ದಾಸನೆಂದು ಅಥವಾ ಜೀತದಾಳೆಂದು ಕಂಡನು. ಇತರ ಕ್ರೈಸ್ತರ ಜೊತೆಯಾಗಿ, ಪೌಲ ಮತ್ತು ತುಖಿಕರು ಶಿಲುಬೆಯ ಮೂಲಕವಾದ ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿದ್ದರು; ಹೀಗೆ ಅವರು ಆತನಿಗೆ ಜೀತದಾಳುಗಳಾಗಿ ಆತನ ಸ್ವತ್ತಾಗಿದ್ದರು.

ಪೌಲನು "ಕ್ರಿಸ್ತನಲ್ಲಿ" ಎಂಬುದಕ್ಕಿಂತಲೂ ಸ್ವಲ್ಪ ಕಡಿಮೆಯಾಗಿ **ಕರ್ತನಲ್ಲಿ** ಎಂಬದನ್ನು ಬಳಸುತ್ತಾನೆ, ಹಾಗಿದ್ದರೂ ಅದು ಒಂದೇ ಅರ್ಥವನ್ನು ಹೊಂದಿದೆ (ನೋಡಿರಿ 1:2, 4, 28; 2:5). ತುಖಿಕನು "ಕರ್ತನಲ್ಲಿ" ಇದ್ದನಾದ್ದರಿಂದ, ಆತನು ಒಂದೇ ದೇಹವಾಗಿರುವ ಸಭೆಯಲ್ಲಿ, ವಿಶ್ವಾಸಿಸುವ ಸಮುದಾಯದಲ್ಲಿ, ಒಂದು ಹೊಸ ಸೃಷ್ಟಿಯಾಗಿದ್ದನು. ತುಖಿಕನು ತನ್ನ ಜೊತೆಯಲ್ಲಿ ಪ್ರಯಾಣಿಸುತ್ತಿದ್ದವನು ಮತ್ತು ಸೇವೆ ಮಾಡುತ್ತಿದ್ದವನು ಮಾತ್ರವೇ ಆಗಿರಲಿಲ್ಲ, ಆದರೆ ಆತನೊಬ್ಬ ಜೊತೆಯ ವಿಶ್ವಾಸಿ ಎಂಬ ಸಂಗತಿ ಕೊಲೊಸ್ಸೆಯವರಿಗೆ ತಿಳಿದಿರಲಿ ಎಂಬ ಕಾರಣಕ್ಕೆ ಪೌಲನು ಈ ಭಿನ್ನತೆಯನ್ನು ಮಾಡುತ್ತಾನೆ.

## "ನೀವು ನನ್ನ ಸಮಾಚಾರವನ್ನು ತಿಳುಕೊಳ್ಳುವ ಹಾಗೆಯೂ ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ . . . ಕಳುಹಿಸಿದ್ದೇನೆ" (4:8)

ಕಳುಹಿಸಿದ್ದೇನೆ (ἔπεμψα, *epempsa*) ಎಂಬುದು ಪೂರ್ತಿಗೊಂಡ ಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಪೌಲನು ಪತ್ರಿಕೆಯನ್ನು ಓದುವವರಿದ್ದ ಜನರ ದೃಷ್ಟಿಕೋನದಿಂದ ಬರೆಯುತ್ತಾನೆ. ಪೌಲನು ತನ್ನ ಬರೆಯುವ ಸಮಯಕ್ಕೆ ಸಂಬಂಧಿಸಿ, "ಅವನನ್ನು ಕಳುಹಿಸುತ್ತಿದ್ದೇನೆ" ಎಂದು ಬರೆದಿರಬಹುದಿತ್ತು; ಆದರೆ ಪತ್ರಿಕೆಯನ್ನು ಸ್ವೀಕರಿಸಿ ಕೊಂಡವರು ಅದನ್ನು ಓದಿದ ಸಂದರ್ಭದಲ್ಲಿ ತುಖಿಕನು ಆಗಲೇ ಕೊಲೊಸ್ಸೆಯಲ್ಲಿದ್ದಿ ರಬಹುದಾಗಿದೆ. ಈ ಕಾರಣಕ್ಕಾಗಿ, ಪೌಲನು ತನ್ನ ದೃಷ್ಟಿಕೋನದ ಬದಲಾಗಿ ಅವರ ದೃಷ್ಟಿಕೋನದಿಂದ ಬರೆದನು.

ತುಖಿಕನು ಅಲ್ಲಿಗೆ ಬರುವ ಉದ್ದೇಶಗಳಲ್ಲೊಂದೆಂದರೆ ಆತನು (ಅವರ) **ಹೃದಯಗಳನ್ನು ಸಂತೈಸುವ**ವನಾಗುವಂತೆ ಆಗಿತ್ತು. "ಸಂತೈಸು" (παρακαλέω, *parakaleō*) ಎಂಬುದು ಒಂದು ಸಂಯುಕ್ತ ಕ್ರಿಯಾಪದವಾಗಿದ್ದು, ಅದು *para*, "ಯೊಂದಿಗೆ" ಮತ್ತು *kaleō* "ಕರೆ" ಎಂಬ ಪದಗಳನ್ನೊಳಗೊಂಡಿರುತ್ತದೆ. ಇದರ ಮೂಲಭೂತ ಅರ್ಥವು

ಪಕ್ಕದಲ್ಲಿ ಬರುವಂತೆ ಒಬ್ಬರನ್ನು ಕರೆಯುವದು, ಅಂದರೆ ಬಲವಾಗಿ ಬೇಡಿಕೊಳ್ಳುವದು ಎಂದಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 16:39; 28:20; ರೋಮಾ 12:1; 1 ಕೊರಿಂಥ 1:10). ಅದು ಧೈರ್ಯವನ್ನು ತುಂಬುವದು ಅಥವಾ ಸಂತೈಸುವದು, ಪ್ರೋತ್ಸಾಹವನ್ನು ಕೊಡುವದದನ್ನು ಸೂಚಿಸುವದು (2 ಕೊರಿಂಥ 1:4; 7:6; ಕೊಲೊಸ್ಸೆ 2:2; 4:8). ಇದೇ ಪದದ ಇನ್ನೊಂದು ರೂಪವಾದ *paraklētos*, ಎಂಬುದು ಸಹಾಯವನ್ನು ಒದಗಿಸುವದಕ್ಕಾಗಿ ನಿಮ್ಮ ಪಕ್ಕದಲ್ಲಿರುವ ಸಹಾಯಕನು ಎಂಬರ್ಥದಲ್ಲಿ ಪವಿತ್ರಾತ್ಮನನ್ನು (ಯೋಹಾನ 14:16, 26; 15:26; 16:7) ಮತ್ತು ಯೇಸುವನ್ನು (1 ಯೋಹಾನ 2:1) ಸೂಚಿಸುವದಕ್ಕೆ ಬಳಸಲ್ಪಟ್ಟಿದೆ.

## ಒನೇಸಿಮನಿಗೆ ಸಂಬಂಧಿಸಿದ್ದು (4:9)

**9ಅವನನ್ನು ನಂಬಿಗಸ್ತನಾದ ಪ್ರಿಯ ಸಹೋದರನಾಗಿರುವ ನಿಮ್ಮ ಊರಿನ ಒನೇಸಿಮನ ಜೊತೆಯಲ್ಲಿ ಕಳುಹಿಸಿದ್ದೇನೆ. ಅವರು ಇಲ್ಲಿ ನಡೆಯುವ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವರು.**

### "ಅವನನ್ನು ನಂಬಿಗಸ್ತನಾದ ಪ್ರಿಯ ಸಹೋದರನಾಗಿರುವ ನಿಮ್ಮ ಊರಿನ ಒನೇಸಿಮನ ಜೊತೆಯಲ್ಲಿ ಕಳುಹಿಸಿದ್ದೇನೆ"

**ಒನೇಸಿಮನು** ತುಖಿಕನ ಸಂಗಡ ಇದ್ದನು. ಈ ಹೆಸರು ಅಕ್ಷರಶಃ "ಲಾಭದಾಯಕ" ಅಥವಾ "ಪ್ರಯೋಜಕ" ಎಂದು ಅನುವಾದಿಸಲ್ಪಟ್ಟಿದೆ. ಒನೇಸಿಮನು ತನ್ನ ಯಜಮಾನನಿಗೆ ಮೊದಲು "ಅಪ್ರಯೋಜಕ" ಮತ್ತು "ಲಾಭದಾಯಕವಲ್ಲದವನಾಗಿದ್ದನು" ಆದರೆ ಈಗ ತನ್ನ ಯಜಮಾನನಿಗೆ ಮತ್ತು ತನಗೆ "ಪ್ರಯೋಜಕ" ಹಾಗೂ "ಲಾಭದಾಯಕ" ಆಗಿ ಮಾರ್ಪಟ್ಟಿರುತ್ತಾನೆಂದು ಬರೆಯುವಾಗ ಪೌಲನು ಶಬ್ದಾಡಂಭರವನ್ನು ಬಳಸುತ್ತಿರಬಹುದಾಗಿದೆ (ಫಿಲೇಮೋನ 11, 20). ಆತನು ಹೆಸರು ವಾಡಿಕೆಯಲ್ಲಿದ್ದದ್ದಾಗಿತ್ತು, ವಿಶೇಷವಾಗಿ ದಾಸರಲ್ಲಿ ಅನೇಕರು ಈ ಹೆಸರನ್ನು ಹೊಂದಿದ್ದರು, ಇದರಿಂದಾಗಿ ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ ಚರ್ಚಿಸಲಾಗಿರುವ ದಾಸನು ಈತನೇ ಎಂಬದಾಗಿ ಅನೇಕರು ಸಂಶಯ ಪಡುವದಕ್ಕೆ ಕಾರಣವಾಗಿರುತ್ತದೆ. ಆತನು ಬಹಳ ಸಂಭಾವ್ಯವಾಗಿ ಫಿಲೆಮೋನನ ಸ್ವತ್ತಾಗಿದ್ದನೆಂದು ತೋರುತ್ತದೆ, ಯಾಕೆಂದರೆ ಪೌಲನ ಪತ್ರಿಕೆಯಲ್ಲಿ ಮೊದಲು ಆತನ ಹೆಸರು ಪ್ರಸ್ತಾಪಿಸಲ್ಪಟ್ಟಿದೆ, ಅದು ಪ್ರಾಥಮಿಕವಾಗಿ ಆತನಿಗೋಸ್ಕರವೇ ಬರೆಯಲ್ಪಟ್ಟಿತ್ತೆಂಬುದನ್ನು ಸೂಚಿಸುತ್ತದೆ. ಫಿಲೆಮೋನನಿಗೆ ಬರೆದ ಪತ್ರಿಕೆಯು ಅಪ್ಫಿಯಳಿಗೆ ಮತ್ತು ಅರ್ಖಿಪ್ಪನಿಗೆ ಸಹ ಬರೆಯಲ್ಪಟ್ಟಿತ್ತೆಂಬ ವಾಸ್ತವಾಂಶದ ಆಧಾರದಲ್ಲಿ, ಒನೇಸಿಮನು ಅವರಿಬ್ಬರ ದಾಸನಾಗಿದ್ದನು ಎಂಬದಾಗಿ ಕೆಲವರು ತರ್ಕ ಮಾಡುತ್ತಾರೆ (ಫಿಲೆಮೋನನಿಗೆ 2).

ತುಖಿಕನಂತಲ್ಲದೆ, ಒನೇಸಿಮನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುವದಿಲ್ಲ ಅಥವಾ ಒಬ್ಬ "ಸೇವಕನು" ಎಂದು ಕರೆಯಲ್ಪಟ್ಟಿರುವದಿಲ್ಲ (ನೋಡಿರಿ 4:7; ಎಫೆಸ 6:21). ಇದಕ್ಕೆ ಕಾರಣ ಬಹುಶಃ ಆತನು ಸುವಾರ್ತೆಯ ಉಪದೇಶಕನಾಗಿರಲಿಲ್ಲ ಆದರೆ ಕೇವಲ ಒಬ್ಬ ನಂಬಿಗಸ್ತ ಕ್ರೈಸ್ತನಾಗಿದ್ದಿರಬೇಕು – ಅಥವಾ ಬಹುಶಃ ಆತನು ಒಬ್ಬ ಭೂಲೋಕದ ಯಜಮಾನನಿಗೆ ಒಬ್ಬ ದಾಸನಾಗಿದ್ದಾನೆ

ಅಥವಾ ಸೇವಕನಾಗಿದ್ದಾನೆಂಬದಾಗಿ ಭಾವಿಸಿಕೊಳ್ಳಲ್ಪಡಬಾರದೆಂಬದು ಪೌಲನ ಬಯಕೆಯಾಗಿದ್ದಿರಬೇಕು.

ಕೊಲೊಸ್ಸೆಯವರಿಗೆ ಒನೇಸಿಮನು ಕೇವಲ ಓಡಿ ಹೋಗಿರುವ ಒಬ್ಬ ದಾಸನೆಂದು ಮಾತ್ರವೇ ಪರಿಚಯವಿದ್ದಿರಬಹುದು, ಹೊರತು ಒಬ್ಬ ಕ್ರೈಸ್ತನೆಂದು ಗೊತ್ತಿಲ್ಲದಿರಬಹುದಾಗಿದೆ (ಫಿಲೆಮೋನನಿಗೆ 10-20). ಪೌಲನು ಆತನನ್ನು ಕುರಿತು ಹೇಳಿದ ಮಾತುಗಳು ಅವನೊಬ್ಬ ಅಪನಂಬಿಗಸ್ತನಾದ ದಾಸನಿಂದ ಮಾರ್ಪಟ್ಟು ಈಗ ಒಬ್ಬ **ಪ್ರಿಯ ಸಹೋದರನೂ ನಂಬಿಗಸ್ತನೂ** ಆಗಿದ್ದನು ಎಂಬುದನ್ನು ವ್ಯಕ್ತಪಡಿಸುತ್ತವೆ. ಈ ಮಾತುಗಳು ಆತನಿಗೆ ಘನತೆ ಹಾಗೂ ಮರ್ಯಾದೆಯನ್ನು ತಂದುಕೊಟ್ಟವು, ಯಾಕೆಂದರೆ ಪೌಲನು ಬೇರೆಯವರಿಗೆ ಬಳಸುವ ರೀತಿಯಲ್ಲಿಯೇ ಅದೇ ವಾತ್ಸಲ್ಯದ ನುಡಿಗಳನ್ನು ಆತನ ವಿಷಯದಲ್ಲಿ ಬಳಸಿದನು. ಬಹುಶಃ ತಮ್ಮ ಜೊತೆಯ ಕ್ರೈಸ್ತರಾಗಿರುವ ದಾಸರಿಗೆ ಯಜಮಾನರು ಹಾಗೂ ಸ್ವತಂತ್ರರು ತೋರಿಸಬೇಕಾದ ಪ್ರೀತಿಯ ಬಗ್ಗೆ ಕೊಲೊಸ್ಸೆಯವರಿಗೆ ಒತ್ತಿ ಹೇಳುವದಕ್ಕೋಸ್ಕರ ಪೌಲನು ಹೀಗೆ ಮಾಡಿರಬಹುದು.

ಅಪೊಸ್ತಲನು ರೋಮಾಪುರದಲ್ಲಿ ಸೆರೆಮನೆಯೊಳಗಿರುವ ವೇಳೆಯಲ್ಲಿ ಒನೇಸಿಮನು ಆತನಿಂದ ಪರಿವರ್ತನೆಗೆ ನಡಿಸಲ್ಪಟ್ಟಿದ್ದನು. ಈ ವಾಸ್ತವಾಂಶವು ಆತನ ಹೇಳಿಕೆಯಲ್ಲಿ ಸ್ಪಷ್ಟವಾಗಿರುತ್ತದೆ "ನಾನು ಸೆರೆಯಲ್ಲಿ ಪಡೆದಿರುವ ನನ್ನ ಮಗನಾದ ಓನೇಸಿಮನ ವಿಷಯದಲ್ಲಿ ನಿನ್ನನ್ನು ಬೇಡಿಕೊಳ್ಳುತ್ತೇನೆ" (ಫಿಲೆಮೋನ 10). ಪೌಲನಿಗೆ ಆತನ ಸಹಾಯದ ಅಗತ್ಯತೆಯಿದ್ದಾಗ್ಯೂ, ಒನೇಸಿಮನ ಯಜಮಾನನ ಒಪ್ಪಿಗೆಯಿಲ್ಲದೆ ಆತನನ್ನು ತನ್ನ ಬಳಿಯಲ್ಲಿಟ್ಟುಕೊಳ್ಳಲು ಬಯಸಲಿಲ್ಲ, ಆದ್ದರಿಂದ ಆತನು ಒನೇಸಿಮನನ್ನು ಪುನಃ ಆತನ ಯಜಮಾನನ ಬಳಿಗೆ ಕಳುಹಿಸಿದನು. ಫಿಲೆಮೋನನಿಗೆ ಬರೆದ ತನ್ನ ಪತ್ರಿಕೆಯಲ್ಲಿ, ಪೌಲನು ಆತನನ್ನು ಒಬ್ಬ ದಾಸನನ್ನಾಗಿ ಅಲ್ಲ, ಆದರೆ ಕರ್ತನಲ್ಲಿ ಒಬ್ಬ ಪ್ರಿಯ ಸಹೋದರನಂತೆ ಸ್ವೀಕರಿಸಿಕೊಳ್ಳಬೇಕೆಂದು ಬೇಡಿಕೊಂಡನು. ಆರ್ಥಿಕವಾಗಿ ಏನಾದರೂ ನಷ್ಟವಾಗಿದ್ದಲ್ಲಿ, ಒನೇಸಿಮನು ಹಣವನ್ನು ತೆಗೆದುಕೊಂಡದ್ದರ ನಿಮಿತ್ತವಾಗಿ ಆಗಿರಬಹುದು ಅಥವಾ ಆತನ ಗೈರುಹಾಜರಿಯಿಂದಾಗಿರಬಹುದಾದ ಆದಾಯದ ನಷ್ಟದ ಮೂಲಕವಾಗಿರಬಹುದು, ಅದನ್ನು ಪೌಲನು ತೀರಿಸುವದಕ್ಕೆ ಸಿದ್ಧನಿದ್ದನು (ಫಿಲೆಮೋನನಿಗೆ 18, 19). ಫಿಲೆಮೋನನಿಗೆ ಬರೆದ ಪತ್ರಿಕೆಯನ್ನು ಜೋಪಾನವಾಗಿಡಲ್ಪಟ್ಟಿರುವದು ಒನೇಸಿಮನು ಬಿಡುಗಡೆಗೊಳಿಸಲ್ಪಟ್ಟಿದ್ದನೆಂಬುದನ್ನು ತೋರಿಸುತ್ತದೆ.

ಒನೇಸಿಮನು "ನನ್ನ ಮಗ," "ನನಗೂ ಪ್ರಯೋಜಕನಾಗಿದ್ದಾನೆ," "ನನ್ನ ಪ್ರಾಣದಂತಿದ್ದರೂ," "ಒಬ್ಬ ಪ್ರಿಯನಾಗಿರುವ ಸಹೋದರ" ಮತ್ತು "ನನಗೆ ಉಪಚಾರಮಾಡುವಂತೆ ಅವನನ್ನು ನನ್ನ ಬಳಿಯಲ್ಲೇ ಇಟ್ಟುಕೊಳ್ಳಬೇಕೆಂದು" ಇಚ್ಛಿಸಿದ್ದೆನು ಎಂದು ಹೇಳುವ ಮೂಲಕ ಒನೇಸಿಮನಿಗಾಗಿ ತನ್ನ ಶ್ಲಾಘನೆಯನ್ನು ವ್ಯಕ್ತಪಡಿಸಿದನು (ಫಿಲೆಮೋನನಿಗೆ 10-13, 16). ಕೊಲೊಸ್ಸೆಯವರು ಒನೇಸಿಮನ ಬಗ್ಗೆ ಒಲವು ತೋರುವಂತೆ ಮತ್ತು ಆತನನ್ನು, ಒಬ್ಬ ಓಡಿಹೋದ ದಾಸನಂತೆ ಅಲ್ಲ, ಆದರೆ ಕ್ರಿಸ್ತನಲ್ಲಿ ಒಬ್ಬ ಸಹೋದರನಂತೆ, ತಮ್ಮ ಅನ್ಯೋನ್ಯತೆಯೊಳಗೆ ಸ್ವೀಕರಿಸಿಕೊಳ್ಳುವ ಹಾಗೆ "ನಂಬಿಗಸ್ತನಾದ ಪ್ರಿಯ ಸಹೋದರನಾಗಿರುವ" ಎಂಬ ಪದಗುಚ್ಛವು ಸಹಾಯಕರವಾಗಿತ್ತು. ಆತನು ಓಡಿ ಹೋದವನಾಗಿದ್ದಾಗಲೂ ಅವರು ಆತನಲ್ಲಿ ಭರವಸೆಯನ್ನಿಡುವದಕ್ಕೆ

ಶಕ್ತರಾಗಿದ್ದರು. ದಾಸರು ಮತ್ತು ಸ್ವತಂತ್ರರು ಏಕರೀತಿಯಾಗಿ ದೇವರ ಮಕ್ಕಳಾಗಬಲ್ಲರು (ಗಲಾತ್ಯ 3:26-28).

ಕೊಲೊಸ್ಸೆಯವರು ಒನೇಸಿಮನನ್ನು **ನಿಮ್ಮ** [ತಮ್ಮ] **ಊರಿನ**ವನಾಗಿ ಬಲ್ಲವರಾಗಿದ್ದರೆಂದು ತೋರುತ್ತದೆ. ಪೌಲನ ಅರ್ಥವು ಇದೇ ಆಗಿರುವದಾದಲ್ಲಿ, ಫಿಲೆಮೋನನು – ಒನೇಸಿಮನ ಯಜಮಾನ ಅಥವಾ ಮಾಜಿ ಯಜಮಾನನು – ಸಹ ಕೊಲೊಸ್ಸೆಗೆ ಸೇರಿದವನಾಗಿದ್ದಿರಬಹುದು. ಇದು ಹಾಗೆಂದು ಅನ್ನಿಸುವದಿಲ್ಲ, ಯಾಕೆಂದರೆ ಫಿಲೆಮೋನನು ಕೊಲೊಸ್ಸೆ ಊರಿನವನಾಗಿದ್ದರೆ, ಪೌಲನು ಕೊಲೊಸ್ಸೆಯವರಿಗೆ ಹೇಳಿದ ವಂದನೆಗಳೊಳಗೆ ಆತನನ್ನು ಏಕೆ ಹೆಸರಿಸಲಿಲ್ಲ? ಅದೇ ಪ್ರಯಾಣದಲ್ಲಿ, ಒನೇಸಿಮನು ಫಿಲೆಮೋನನಿಗೆ ವೈಯಕ್ತಿಕವಾದ ಪತ್ರವೊಂದನ್ನು ಸಹ ತಲುಪಿಸಲಿದ್ದನಾದ್ದರಿಂದ, ಆತನು ಫಿಲೆಮೋನನ ಹೆಸರನ್ನು ಸೇರಿಸಲಿಲ್ಲವೆಂದು ಕೆಲವರು ಊಹಿಸಿಕೊಳ್ಳುತ್ತಾರೆ.

## "ಅವರು ಇಲ್ಲಿ ನಡೆಯುವ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವರು"

ಕೊಲೊಸ್ಸೆಯವರಿಗೆ ಬರೆದ ಪತ್ರವನ್ನು ಕೊಟ್ಟು ತುಖಿಕನನ್ನು ಕಳುಹಿಸುವದರಲ್ಲಿ ಪೌಲನು ಇಮ್ಮಡಿ ಉದ್ದೇಶ ಹೊಂದಿದ್ದನು: ವಾಚಕರನ್ನು ಸಂತೈಸುವದಕ್ಕೆ ಮತ್ತು Lycus ಕಣಿವೆಯಲ್ಲಿ ಸಹೋದರರಿಗೆ ಪೌಲನ ಪರಿಸ್ಥಿತಿಯ ಬಗ್ಗೆ ತಿಳಿಯಪಡಿಸುವದು. ಪೌಲನು ತನ್ನ ಸಂಗಡಿಗರ ಪಟ್ಟಿಯೊಳಗೆ ಪತ್ರವನ್ನು ಕೊಂಡೊಯ್ಯುವವರನ್ನು ಮೊದಲು ಹೆಸರಿಸಿ, ಅವರು ರೋಮಾಪುರದಲ್ಲಿರುವ ತನ್ನ ಸ್ಥಿತಿಗತಿಗಳ ಬಗ್ಗೆ ವರದಿ ಮಾಡುವರೆಂದು ಹೇಳುತ್ತಾನೆ. ಸಂಭಾವ್ಯವಾಗಿ, ಪೌಲನು ಸೆರೆಯಲ್ಲಿರುವನೆಂಬ ಬಗ್ಗೆ ಕೊಲೊಸ್ಸೆಯವರು ಕೇಳಿಸಿಕೊಂಡಿದ್ದರು ಆದರೆ ಅಲ್ಲಿನ ಸ್ಥಿತಿಯ ಕುರಿತು ಅಷ್ಟಾಗಿ ಅರಿಯದವರಾಗಿದ್ದಿರಬಹುದು. ಸೆರೆಮನೆಯಲ್ಲಿದ್ದರೂ ಪೌಲನು ಧೈರ್ಯವಾಗಿಯೂ ಸಫಲನಾಗಿಯೂ ಇರುವನೆಂಬ ಸುದ್ಧಿಯು ಅವರನ್ನು ಪ್ರೋತ್ಸಾಹಿಸಲಿತ್ತು. ಸಂದೇಶವಾಹಕರ ಮುಖ್ಯ ಧ್ಯೇಯದ ಬಗ್ಗೆ ಪೌಲನು ಮೂರು ಸಾರಿ ಹೇಳುತ್ತಾನೆ. ಮೊದಲನೆಯದಾಗಿ, "ತುಖಿಕನು ನನ್ನ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು" ಎಂದು ಹೇಳಿದನು (4:7). ನಂತರ, ಆತನು ಹೇಳಿದ್ದೇನೆಂದರೆ "ನೀವು ನನ್ನ ಸಮಾಚಾರವನ್ನು ತಿಳುಕೊಳ್ಳುವ ಹಾಗೆಯೂ . . ." ತುಖಿಕನನ್ನು ಕಳುಹಿಸಿದ್ದೇನೆ (4:8). ಮೂರನೆಯದಾಗಿ, ಆತನು ಹೀಗೆ ಹೇಳುತ್ತಾನೆ, **ಅವರು ಇಲ್ಲಿ ನಡೆಯುವ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವರು**.

ಪೌಲನು ತನ್ನ ಪರಿಸ್ಥಿತಿಯ ಕುರಿತಾಗಿ ಪತ್ರಿಕೆಯಲ್ಲಿ ಏನನ್ನೂ ಬಹಿರಂಗಪಡಿಸಲಿಲ್ಲ. ಪತ್ರಿಕೆಯು ಅಧಿಕಾರಿಗಳ ಕೈಗೆ ಸಿಕ್ಕಿಕೊಂಡಲ್ಲಿ ಸೆರೆಮನೆಯಲ್ಲಿನ ಇಷ್ಟವಾಗದ ಸ್ಥಿತಿಗಳು ಕುರಿತಾದ ಒಂದು ಲಿಖಿತ ವರ್ಣನೆಯು ಆತನಿಗೆ ಕಾಟವನ್ನು ಕೊಡಬಹುದಾಗಿತ್ತು ಮತ್ತು ಆತನನ್ನು ಅಪಾಯಕ್ಕೆ ಸಿಲುಕಿಸುವ ಸಾಧ್ಯತೆಯಿತ್ತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಹೇಗೂ, ಈ ಅಭಿಪ್ರಾಯವು ನಿರಾಧಾರವಾದದ್ದು ಯಾಕೆಂದರೆ ಆತನನ್ನು ರೋಮಾಪುರದಲ್ಲಿ ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು. ಲೂಕನು ಹೀಗೆ ಬರೆಯುತ್ತಾನೆ, "ನಾವು ರೋಮಾಪುರಕ್ಕೆ ಬಂದ ಮೇಲೆ ಪೌಲನು ತನ್ನನ್ನು ಕಾಯುವ ಸಿಪಾಯಿಯೊಂದಿಗೆ ಪ್ರತ್ಯೇಕವಾಗಿರಬಹುದೆಂಬ ಅಪ್ಪಣೆಯನ್ನು ಹೊಂದಿದನು" (ಅಪೊಸ್ತಲರ ಕೃತ್ಯಗಳು 28:16). "ತರುವಾಯ ಅವನು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಪೂರಾ ಎರಡು ವರುಷ ಇದ್ದು ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡು ಯಾವ ಅಡ್ಡಿಯೂ ಇಲ್ಲದೆ ತುಂಬಾ

ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶಮಾಡುತ್ತಾ ಇದ್ದನು" (ಅಪೊಸ್ತಲರ ಕೃತ್ಯಗಳು 28:30, 31).

ಸ್ಪಷ್ಟವಾಗಿ ಕಾಣುವ ಪ್ರಕಾರ, ಒಂದು ಪತ್ರಿಕೆಯಲ್ಲಿ ಬರೆಯುವದಕ್ಕೆ ಕಾರ್ಯಸಾಧ್ಯವಾಗದಂಥ ಪೂರ್ಣ ವರದಿಯನ್ನು ಕೊಲೊಸ್ಸೆಯವರು ಸ್ವೀಕರಿಸಿಕೊಳ್ಳಬೇಕೆಂದು ಪೌಲನು ಬಯಸಿದನು. ಒಂದು ಸಂಪೂರ್ಣವಾದ ಮೌಖಿಕ ವರದಿಯನ್ನು ಕೇಳಿದ ಬಳಿಕ, ಪೌಲನ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಪೌಲನ ಪರಿಸ್ಥಿತಿಯ ಕುರಿತು ಇತರ ವಿವರಗಳನ್ನು ತಿಳುಕೊಳ್ಳುವದಕ್ಕೆ ಪ್ರಶ್ನೆಗಳನ್ನು ಕೇಳಬಹುದಿತ್ತು. ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, ತುಖಿಕನು ನನ್ನ ವಿಷಯವಾದ ಸಂಗತಿಗಳ ಬಗ್ಗೆ ನಿಮಗೆ ಪೂರ್ಣವಾಗಿ ತಿಳಿಸುವನು ಎಂಬದಾಗಿ ಪೌಲನು ಹೇಳುತ್ತಾನೆ (ಎಫೆಸ 6:21).

ಆತನು ಗೃಹಬಂಧಿಯಾಗಿದ್ದನಾದ್ದರಿಂದ, ಪೌಲನ ಪರಿಸ್ಥಿತಿಯು ಒಂದು ವೇಳೆ ಆತನು ಸೆರೆಮನೆಯ ಕೋಣೆಯಲ್ಲಿಡಲ್ಪಟ್ಟಿದ್ದರೆ ಇರಬಹುದಾಗಿದ್ದ ಸ್ಥಿತಿಗಿಂತಲೂ ಉತ್ತಮವಾಗಿತ್ತು. ಆತನು ಸಹಿಸಲಾಗದ ಸೆರೆಮನೆಯ ಪರಿಸ್ಥಿತಿಗಳಲ್ಲಿ ಬಾಧೆ ಪಡುತ್ತಿದ್ದಾನೇನೋ ಎಂಬ ಆತಂಕದಿಂದ ಕೊಲೊಸ್ಸೆಯವರಿಗೆ ತುಖಿಕ ಹಾಗೂ ಒನೇಸಿಮರಿಂದ ಸಿಕ್ಕುವ ವರದಿಯು ಬಿಡುಗಡೆ ಕೊಡುವದಾಗಿತ್ತು. ಈ ಸಂದೇಶವಾಹಕರು ಪೌಲನಿಗೆ ಏನು ಸಂಭವಿಸುತ್ತಿದೆ – ಪೌಲನು ಅನುಭವಿಸುತ್ತಿರುವ ಎಲ್ಲವನ್ನೂ ಅಲ್ಲ, ಆದರೆ ಆತನ ಸ್ಥಿತಿಯ ಕುರಿತು ಅವರು ತಿಳುಕೊಳ್ಳುವ ಅಗತ್ಯವಿರುವ "ಎಲ್ಲಾ" – ಎಂಬ ಕುರಿತಾದ "ಸಂಗತಿಗಳನ್ನೆಲ್ಲಾ" (*πάντα*, *panta*, "ಎಲ್ಲಾ") ತಿಳಿಸುವವರಾಗಿದ್ದರು.

ದೇವರ ಪ್ರಕಟನೆಯನ್ನು ಮೌಖಿಕವಾಗಿ ತಿಳಿಯಪಡಿಸುವಿಕೆಯ ಮೇಲಷ್ಟೇ ಅವಲಂಬಿತನಾಗುವ ಬದಲಾಗಿ ಪೌಲನು ಪತ್ರಿಕೆಯನ್ನು ಕಳುಹಿಸುವದಕ್ಕೆ ಕಾರಣವೆಂದರೆ ತುಖಿಕನಿಗಾಗಲಿ ಅಥವಾ ಒನೇಸಿಮನಿಗಾಗಲಿ ಪೌಲನಿರುವಂಥ ಅಧಿಕಾರ ಅಥವಾ ಪ್ರೇರಣೆಯು ಇರಲಿಲ್ಲ. ಆತನು ತನ್ನ ಸಂದೇಶವನ್ನು ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಬರೆದಿಡುವ ಮೂಲಕ ಅವರಿಗೆ ಅನುಸರಿಸುವದಕ್ಕೆ ಮತ್ತು ಅವುಗಳನ್ನು ಮತ್ತೇ ಮತ್ತೇ ಓದಿ ತಿಳಿದುಕೊಳ್ಳುವಂತೆ ನಿಖರವಾದ ಉಪದೇಶಗಳನ್ನು ಒದಗಿಸಿತ್ತು. ಮುಂಬರುವ ಪೀಳಿಗೆಗಳಿಗಾಗಿ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯ ಮಹಾ ಸಂದೇಶವು ಸಂರಕ್ಷಿಸಡಲ್ಪಡಬೇಕೆಂದು ಸಹ ದೇವರ ಬಯಸಿದನೆಂಬುದರಲ್ಲಿ ಯಾವ ಸಂಶಯವೇ ಇಲ್ಲ.

ನಾವು ಕೇಳಬಹುದಾದ ಹಲವಾರು ಪ್ರಶ್ನೆಗಳು ಈ ಪತ್ರಿಕೆಯ ಕಡೆಯ ವಿಭಾಗದಲ್ಲಿ ಉತ್ತರಿಸಲ್ಪಟ್ಟಿರುವದಿಲ್ಲ. ಉದಾಹರಣೆಗೆ, ಫಿಲೆಮೋನ ಮತ್ತು ಅಪ್ಫಿಯಳು ಒನೇಸಿಮನ ಮುಂಚಿನ ಊರಾದ ಕೊಲೊಸ್ಸೆಯದಲ್ಲಿ ವಾಸಿಸುವವರಾಗಿದ್ದರೆ (ಫಿಲೆಮೋನನಿಗೆ 1, 2), ಪೌಲನು ಏಕೆ ಅವರಿಗೆ ವಂದನೆಗಳನ್ನು ಹೇಳಲಿಲ್ಲ? ಪೌಲನು ಮಾರ್ಕನ ಕುರಿತಾಗಿ ನೀಡಿದ ನಿರ್ದೇಶನಗಳು, ಕೊಲೊಸ್ಸೆಯವರಿಗೋಸ್ಕರ ಎಪಫ್ರನ ಪ್ರಯಾಸಗಳು, ನುಂಫಳ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುವದು, ಪತ್ರಿಕೆಯನ್ನು ಲವೊದಿಕಯದೊಂದಿಗೆ ವಿನಿಮಯ ಮಾಡಿಕೊಳ್ಳುವ ತಾರ್ಕಿಕತೆ, ಮತ್ತು ಅರ್ಖಿಪ್ಪನಿಗೆ ಕೊಡಲಾಗಿರುವ ಬುದ್ಧಿವಾದ ಇತ್ಯಾದಿಗಳ ವಿಷಯದಲ್ಲಿ ಇಂದು ವಾಚಕರು ಉತ್ತರ ಸಿಗದೆ ಚಕಿತರಾಗಬಹುದು. ಈ ಪ್ರಶ್ನೆಗಳು ಒಂದು ಮರ್ಮವಾಗಿ ಉಳಿಯುತ್ತವಾದರೂ, ಪೌಲನು ಏನು

ಹೇಳುತ್ತಿದ್ದಾನೆಂಬುದನ್ನು ಆತನ ಪತ್ರಿಕೆಯ ಮೂಲ ವಾಚಕರು ಖಂಡಿತವಾಗಿಯೂ ಅರ್ಥಮಾಡಿಕೊಂಡಿದ್ದರು.

# ಅನ್ವಯಿಸುವಿಕೆ

## ಸಹೋದರರಿಗೆ ವರದಿ ಸಲ್ಲಿಸುವದು

ಕೊಲೊಸ್ಸೆಯವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ಪೌಲನು ವೈಯಕ್ತಿಕ ವಿಷಯಗಳನ್ನು ಸೇರಿಸಲಿಲ್ಲ. ತುಖಿಕ ಮತ್ತು ಒನೇಸೊಮರು ಕೊಲೊಸ್ಸೆಗೆ ಬಂದು ತಲುಪಿದಾಗ, ಅವರು ಆತನ ಪರಿಸ್ಥಿತಿಗಳ ಮತ್ತು ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸುವರು. ಒಂದು ಸಂಪೂರ್ಣವಾದ ವರದಿಯನ್ನು ಕೊಡುವರೆಂಬದಾಗಿ ಪೌಲನು ತನ್ನ ಸಂದೇಶವಾಹಕರಲ್ಲಿ ಭರವಸವಿಡುವದಕ್ಕೆ ಶಕ್ತನಾಗಿದ್ದನು.

ತಾನು ಹೇಗಿರುತ್ತಾನೆಂಬದರ ಬಗ್ಗೆ ಕೊಲೊಸ್ಸೆಯವರಿಗೆ ಗೊತ್ತಾಗಬೇಕೆಂದು ಪೌಲನು ಏಕೆ ಬಯಸಿದ್ದನು? ಅದಕ್ಕೆ ಸಂಭಾವ್ಯವಾದ ಕಾರಣಗಳೆಂದರೆ ಅವರು ಆತನಿಗೋಸ್ಕರ ಯಾವಾವ ಕಾರ್ಯಗಳಿಗೆ ಪ್ರಾರ್ಥಿಸಬೇಕೆಂದು ತಿಳಿದುಕೊಳ್ಳಬೇಕೆಂದು, ಸುವಾರ್ತಾಪ್ರಸಾರಣೆಯ ಪ್ರಗತಿಯ ಬಗ್ಗೆ ತಿಳಿದು ಪ್ರೋತ್ಸಾಹಗೊಳ್ಳಬೇಕು, ಕರ್ತನಿಗೋಸ್ಕರ ಕಠಿಣವಾಗಿ ಶ್ರಮಿಸಬೇಕೆಂಬ ಆತನ ಮಾದರಿಯನ್ನು ನೋಡಿ ಅವರು ಪ್ರೇರಣೆಗೊಳ್ಳಬೇಕು, ಅಥವಾ ದೇವರ ವಾಕ್ಯದ ಯಶಸ್ಸಿನಲ್ಲಿ ಆತನೊಂದಿಗೆ ಸಂತೋಷಿಸಬೇಕು ಎಂಬದಾಗಿ ಆತನು ಉತ್ಸುಕನಾಗಿದ್ದನು. ಬಹುಶಃ ಅವರು ಆತನಿಗೆ ಅಗತ್ಯ ಇದ್ದರೆ ಆರ್ಥಿಕ ಸಹಾಯವನ್ನು ಅಥವಾ ಪ್ರೋತ್ಸಹಕರ ಸಂದೇಶಗಳನ್ನು ಕಳುಹಿಸುವದಕ್ಕೆ ಶಕ್ತರಾಗುತ್ತಿದ್ದರು. ಸಭೆಗಳು ಇಂದು ತಮ್ಮ ಮಿಶನರಿಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವದಕ್ಕೆ ಇವುಗಳು ಉತ್ತಮ ಕಾರಣಗಳಾಗಿರುತ್ತವೆ.

ಮಿಶನ್ ವರದಿಗಳು ಪ್ರಾಮುಖ್ಯವಾದವುಗಳು. ಬೇರೆ ಕ್ರೈಸ್ತರು ಮಿಶನರಿಗಳ ಸ್ಥಿತಿಗಳ ಬಗ್ಗೆ ತಿಳಿದುಕೊಳ್ಳತಕ್ಕದ್ದು, ಈ ಸಂವಹನದ ಉದ್ದೇಶಕ್ಕಾಗಿಯೇ ಸಮರ್ಪಿತ ವ್ಯಕ್ತಿಗಳನ್ನು ಆಯ್ಕೆಮಾಡಿಕೊಳ್ಳತಕ್ಕದ್ದು.

*ಸಭೆಗಳಿಗೆ ಮಿಶನ್ ವರದಿಗಳ ಅಗತ್ಯವಿರುತ್ತದೆ.* ಸದಸ್ಯರಿಗೆ ಮಾಹಿತಿಯು ಇರುವದಾದರೆ, ಅವರು ಮಿಶನ್ ಕೆಲಸದಲ್ಲಿ ಬಹಳಷ್ಟು ಆಸಕ್ತಿಯನ್ನು ತೆಗೆದುಕೊಳ್ಳುವರು. ಅವರಿಗೆ ಏನು ನಡೆಯುತ್ತಿದೆಯೆಂಬುದು ತಿಳಿದಿರುತ್ತಾದ್ದರಿಂದ, ಅವರು ಸೇವೆಗಾಗಿ ಪ್ರಾರ್ಥನೆಯನ್ನು ಮಾಡುವರು ಮತ್ತು ದೇವರಿಂದ ಏನನ್ನು ಬೇಡಿಕೊಳ್ಳಬೇಕೆಂದು ತಿಳಿಯುವರು.

ಪೌಲನು ತನ್ನ ಸುವಾರ್ತಾಪ್ರಯಾಣಗಳಿಂದ ಹಿಂದಿರುಗುವ ವೇಳೆ, ತಾನು ಪ್ರಯಾಣವನ್ನು ಆರಂಭಿಸಿದ ಸ್ಥಳವಾದ ಅಂತಿಯೋಕ್ಯಕ್ಕೆ ಹಿಂದಿರುಗುತ್ತಿದ್ದನು. ಪೌಲನು ಮೊದಲ ಸುವಾರ್ತಾ ಪ್ರಯಾಣದಿಂದ ಹಿಂದಿರುಗಿ ಬಂದದ್ದರ ವಿಷಯವಾಗಿ ಲೂಕನು ಹೀಗೆ ಬರೆಯುತ್ತಾನೆ, “ಅಲ್ಲಿ ಸಭೆಯನ್ನು ಕೂಡಿಸಿ ದೇವರು ತಮ್ಮೊಂದಿಗಿದ್ದು ಮಾಡಿದ್ದೆಲ್ಲವನ್ನೂ ಆತನು ಅನ್ಯಜನರಿಗೆ ನಂಬಿಕೆಯ ಬಾಗಿಲನ್ನು ತೆರೆದದ್ದನ್ನೂ ವಿವರವಾಗಿ ಹೇಳಿದರು” (ಅಪೊಸ್ತಲರ ಕೃತ್ಯಗಳು 14:27).

ತಮಗೆ ಆರ್ಥಿಕವಾಗಿ ಸಹಾಯ ಮಾಡುವವರು ತಮ್ಮೊಂದಿಗೆ ಸಂವಹನ

ಮಾಡುವದಿಲ್ಲ ಎಂಬುದಕ್ಕಾಗಿ ಕೆಲವು ಮಿಶನರಿಗಳು ನಿರಾಶರಾಗುತ್ತಾರೆ. ಒಬ್ಬರಿಗೊಬ್ಬರು ಹೇಗೆ ಸಂಬಂಧಿಸಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೆ ಸೇವಾಕ್ಷೇತ್ರದಲ್ಲಿರುವವರು ಮತ್ತು ಸ್ವಸಭೆಯ ನಡುವೆ ಸಂವಹನ ಪ್ರಾಮುಖ್ಯವಾಗಿರುತ್ತದೆ.

*ಮಿಶನರಿಗಳ ಕೆಲಸ ಮತ್ತು ಪರಿಸ್ಥಿತಿಗಳ ಬಗ್ಗೆ ಅರ್ಥಮಾಡಿಕೊಳ್ಳುವದು ಒಂದು ಆದ್ಯತೆಯಾಗಿರಬೇಕು.* ಸೇವೆಯು ಉತ್ತಮವಾಗಿ ಸಾಗುತ್ತಿರುವ ವೇಳೆ, ಮಿಶನರಿಗಳು ಅದರ ಬಗ್ಗೆ ಬೇರೆಯವರೊಂದಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಅವರು ಕಷ್ಟಗಳನ್ನು ಎದುರಿಸುತ್ತಿದ್ದರೆ, ಅವರಿಗೆ ವಿಶೇಷ ಸಹಾಯದ ಅಗತ್ಯವಿರುತ್ತದೆ ಆದರೆ ಅವರು ತಮ್ಮ ಕಷ್ಟಗಳನ್ನು ಕುರಿತು ತಿಳಿಸದಿರಬಹುದು. ಜವಾಬ್ದಾರಿಯುತವಾದ ಬೆಂಬಲ ಮಾಡುವ ಸಭೆಗಳು ತಮ್ಮ ಮಿಶನರಿಗಳ ಜೊತೆಗಿನ ಸಂವಹನದ ಮಾರ್ಗವನ್ನು ತೆರೆದಿಟ್ಟಿರಬೇಕು.

ಮಿಶನರಿಗಳು ಮತ್ತು ಸಹಾಯವನ್ನು ಒದಗಿಸುವ ಸಭೆಗಳ ನಡುವೆ ಹೋಗಿ ಬರುವದಕ್ಕಾಗಿ ನಂಬಿಗಸ್ತರಾದ ಮತ್ತು ಸಮರ್ಪಣೆಯುಳ್ಳ ವ್ಯಕ್ತಿಗಳನ್ನು ಆಯ್ಕೆಮಾಡಿಕೊಳ್ಳತಕ್ಕದ್ದು. ಸಾಧ್ಯವಾದರೆ, ಹಿರಿಯರು ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ನಡೆಯುತ್ತಿರುವ ಕೆಲಸವನ್ನು ಪರಿಶೀಲಿಸುವದಕ್ಕೆ ಮತ್ತು ಕೆಲಸದಲ್ಲಿ ತೊಡಗಿಸಿಕೊಂಡವರನ್ನು ಪ್ರೋತ್ಸಾಹಿಸುವದಕ್ಕೆ ಜನರನ್ನು ಅಲ್ಲಿಗೆ ಕಳುಹಿಸಿ ಕೊಡಬೇಕು. ಪತ್ರಗಳು, ಫೋನ್ ಕರೆಗಳು ಮತ್ತು ಇ – ಮೇಲ್‌ಗಳು ಸಹಾಯಕರವಾಗಿರುತ್ತವಾದರೂ, ಅವುಗಳು ಸೇವಾಕ್ಷೇತ್ರಕ್ಕೆ ಭೇಟಿ ಕೊಡುವವರಿಗೆ ಪರ್ಯಾಯವಾಗುವದಕ್ಕೆ ಸಾಧ್ಯವಿಲ್ಲ.

ಪೌಲನು ತನ್ನ ಪರಿಸ್ಥಿತಿಗಳ ಬಗ್ಗೆ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ವಿವರಿಸಿರಬಹುದಿತ್ತು, ಆದರೆ ಒಂದು ತುಂಡು ಕಾಗದದ ಮೇಲೆ ಬರೆದ ಮಾತುಗಳು ಬಾಯಿಂದ ಹೇಳುವ ಮಾತುಗಳಷ್ಟು ಅರ್ಥವತ್ತಾಗಿರುವದಿಲ್ಲ. ಬರೆಯಲ್ಪಟ್ಟಿರುವ ಒಂದು ಕ್ಲುಪ್ತವಾದ ವರದಿಯು ಒಂದು ವೈಯಕ್ತಿಕವಾದ ವರದಿಯಷ್ಟು ಆಸಕ್ತಿಕರ ಅಥವಾ ಸಂಪೂರ್ಣವಾಗಿರಲಾರದು. ಅಷ್ಟುಮಾತ್ರವಲ್ಲದೆ, ಕೆಲಸದ ಬಗ್ಗೆ ಪೂರ್ಣ ಗ್ರಹಿಕೆಯನ್ನು ಪಡೆದುಕೊಳ್ಳಲು ಸಂದೇಶವಾಹಕರನ್ನು ಪ್ರಶ್ನಿಸಬಹುದಾಗಿರುತ್ತದೆ.

ಸಹೋದರರಿಗೆ ವರದಿಯನ್ನು ಸಲ್ಲಿಸುವದು ಶಾಸ್ತ್ರಗಳಲ್ಲಿ ಆದ್ಯತೆಯನ್ನು ಹೊಂದಿದೆ ಮತ್ತು ಅದು ಸಹಾಯವನ್ನು ಒದಗಿಸುವ ಸಭೆಗಳ ಹಾಗೂ ಮಿಶನರಿಗಳ ನಡುವಿನ ಸಂಬಂಧಕ್ಕೆ ಜೀವಧಾರಕವಾಗಿರುತ್ತದೆ. ಕಾಣಿಕೆಗಳನ್ನು ಕೊಡುವವರು ಹೊರ ದೇಶದಿಂದ ಸಿಕ್ಕುವ ಶುಭ ಸುದ್ದಿಯಿಂದ ಪ್ರಯೋಜನವನ್ನು ಹೊಂದುವರು, ಮತ್ತು ಅವರ ನಂಬಿಗಸ್ತ ಸಹೋದರರು ಹಾಗೂ ಸಹೋದರಿಯರು ಅವರಿಗಾಗಿ ಮತ್ತು ಅವರ ಸೇವೆಗಾಗಿ ಪ್ರಾರ್ಥಿಸುತ್ತಿರುವರೆಂಬುದನ್ನು ತಿಳಿದು ಮಿಶನರಿಗಳು ಪ್ರಯೋಜನವನ್ನು ಹೊಂದುವರು.

## ತುಖಿಕನು, ಪ್ರಶಂಸನೀಯ ಜೊತೆ ಕೆಲಸಗಾರನು (4:7-9)

ತುಖಿಕನಲ್ಲಿರುವ ಗುಣಗಳು ಎಲ್ಲಾ ಕ್ರೈಸ್ತರಲ್ಲಿರಬೇಕೆಂದು ಬಯಸುವಂಥ ಗುಣಸ್ವಭಾವಕ್ಕೆ ದೃಷ್ಟಾಂತವಾಗಿರುತ್ತವೆ. ನಾವು ಕ್ರಿಸ್ತನಿಗೋಸ್ಕರ ಇತರರ ಸಂಗಡ ಕೆಲಸ ಮಾಡುವಾಗ, ಪೌಲನು ತುಖಿಕನನ್ನು ಕಂಡ ರೀತಿಯಲ್ಲಿಯೇ ನಾವು ನಮ್ಮ ಜೊತೆ ಕೆಲಸಗಾರರಿಗೆ ಕಾಣುವ ಹಾಗೆ ಜೀವಿಸುವವರಾಗಿರಬೇಕು. ಅಲ್ಲದೆ, ನಾವು ನಮ್ಮ ಜೊತೆ ಕೆಲಸಗಾರರಲ್ಲಿ ಒಳ್ಳೇ ಗುಣಗಳನ್ನು ಕಾಣುವಾಗ, ಪೌಲನು ಮಾಡಿದ ರೀತಿಯಲ್ಲಿಯೇ, ನಾವು ಅವರನ್ನು ಪ್ರಶಂಸಿಸಬೇಕು. ಪೌಲನು ತುಖಿಕನ ಕುರಿತು ಹೇಗೆ ಹೇಳಿದನೆಂಬುದನ್ನು

ಗಮನಿಸಿರಿ:

*"ಪ್ರಿಯ ಸಹೋದರನೂ."* ಕ್ರೈಸ್ತರು ಪ್ರೀತಿಯಲ್ಲಿ ಒಂದಾಗಿ ಬಂಧಿಸಲ್ಪಟ್ಟವರಾಗಿರಬೇಕು. ಕರ್ತನಲ್ಲಿ ನಂಬಿಗಸ್ತರಾಗಿ ಜೀವಿಸುವವರು ಪ್ರೀತಿ ಹಾಗೂ ಗೌರವಕ್ಕೆ ಅರ್ಹರಾಗಿದ್ದಾರೆ. ಕೆಲವು ಸಾರಿ ಸೇವೆ ಮಾಡುವದಕ್ಕೆ ಆಕಾಂಕ್ಷಿಸುವವರು ಹೊಟ್ಟೆಕಿಚ್ಚಿನ ಕಾರಣದಿಂದ ಜೊತೆ ಕೆಲಸಗಾರರನ್ನು ಪ್ರೀತಿಸಲು ವಿಫಲರಾಗುತ್ತಾರೆ. ಇದು ಎಂದಿಗೂ ಸಂಭವಿಸಬಾರದು, ಯಾಕೆಂದರೆ ಅಂತಹ ಭಾವಗಳು ಪೈಪೋಟಿ ಮತ್ತು ಹಗೆತನವನ್ನು ಹುಟ್ಟಿಸುತ್ತವೆ.

*"ನಂಬಿಗಸ್ತನಾದ ಸೇವಕನೂ."* ಯೇಸುವಿನೊಂದಿಗೆ ಹೊಸ ಜೀವನ ನಡಿಸುವ (1 ಕೊರಿಂಥ 15:19, 20, 58), ಪರಲೋಕದಲ್ಲಿ ನಿತ್ಯಜೀವ ಹೊಂದುವ (1 ಪೇತ್ರ 1:3, 4), ಮತ್ತು ಯೇಸುವಿನ ಸಾರೂಪ್ಯವುಳ್ಳವರಾಗಿ ರೂಪಾಂತರಗೊಳ್ಳುವ (1 ಯೋಹಾನ 3:2, 3) ನಿರೀಕ್ಷೆಯ ಕಾರಣದಿಂದಾಗಿ ಸಾಯಬೇಕಾದರೂ ಯೇಸುವಿಗೆ ನಿಷ್ಠೆಯಿಂದಿರುವವರೇ ನಂಬಿಗಸ್ತ ಕ್ರೈಸ್ತರಾಗಿರುವರು (ಪ್ರಕಟನೆ 2:10). ಹಿಂಸೆ, ನಿರಾಶೆ, ಅಪನಂಬಿಗಸ್ತ ಸಹೋದರರು, ಅಥವಾ ಸೈತಾನನಿಂದ ಶೋಧನೆಗಳಂತಹ ಪರಿಸ್ಥಿತಿಗಳನ್ನು ಎದುರಿಸುವಾಗ ನಿಜವಾದ ಅಚಲತೆಯು ಕೊನೆಗೊಳ್ಳುವದಿಲ್ಲ.

*"ಜೊತೆಯ ದಾಸನೂ."* ಪಾಪವನ್ನು ಮಾಡುವವರು ಪಾಪಕ್ಕೆ ದಾಸರು, ಆದರೆ ಅವರು ಯೇಸುವಿಗೆ ವಿಧೇಯರಾಗುವ ಮೂಲಕ ನೀತಿಗೆ ದಾಸರಾಗಬಲ್ಲರು (ರೋಮಾ 6:17, 18). ಕ್ರಿಸ್ತನ ಸೇವಕರು ಆತನ ಸೇವೆಯನ್ನು ಮಾಡುವದರಲ್ಲಿ ಸಾಮರಸ್ಯದಿಂದ ಒಟ್ಟಾಗಿ ಕೆಲಸ ಮಾಡಬೇಕು. ಯೇಸುವಿಗೆ ಕೆಲಸ ಮಾಡುವದರಲ್ಲಿ ಕ್ರೈಸ್ತರು ಪೌಲ ಹಾಗೂ ತುಖಿಕನ ನಡುವೆ ಇದ್ದ ಸಾಮರಸ್ಯದ ಮಾದರಿಯನ್ನು ಅನುಸರಿಸಬೇಕು.

ತುಖಿಕನು ಒಬ್ಬ ನಂಬಿಗಸ್ತ ಸಂದೇಶವಾಹಕನಿಗೆ ಉದಾಹರಣೆಯಾಗಿದ್ದಾನೆ. ಆತನನ್ನು ಒಂದು ಮಾದರಿಯನ್ನಾಗಿ ಬಳಸಿಕೊಂಡು, ಕ್ರೈಸ್ತರು ಈ ಕೆಳಗಿನವುಗಳನ್ನು ಮಾಡುವದಕ್ಕೆ ಪ್ರಯಾಸ ಪಡಬೇಕೆಂದು ನೋಡುತ್ತೇವೆ:

1. ವಿಶ್ವಾಸಾರ್ಹರಾಗಿರಿ. ಪೌಲನಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ತುಖಿಕನು ಆತನ ಪರಿಸ್ಥಿತಿ ಕುರಿತು ವರದಿ ಮಾಡುವನೆಂದು ಪೌಲನು ಆತನ ಮೇಲೆ ಭರವಸೆಯನ್ನು ಇಡುವದಕ್ಕೆ ಶಕ್ತನಾಗಿದ್ದನು. ಬೇರೆಯವರ ಪರವಾಗಿ ಮಾತಾಡುವವರು ತಾವು ಹೇಳುವದು ನಿಖರವಾದದ್ದಾಗಿರುವಂತೆ ಜಾಗ್ರತೆ ವಹಿಸತಕ್ಕದ್ದು. ಸುಳ್ಳು ವರದಿಯನ್ನು ಮಾಡುವದು ಸಭೆಯ ಹೆಸರನ್ನು ಕೇಡಿಸುತ್ತದೆ ಮತ್ತು ಹಾನಿಕಾರಕವಾಗಿರಬಲ್ಲದು. ಹಲವು ಸಮಯಗಳಲ್ಲಿ, ಕ್ರೈಸ್ತರು ತಮಗೆ ಗೊತ್ತಿರುವ ಎಲ್ಲವನ್ನೂ ಹೇಳಿಬಿಡಕೂಡದು (ಅದು ಸತ್ಯವಾಗಿದ್ದರೂ ಸರಿಯೇ). ಯಾಕೋಬನು ಹೀಗೆ ಬರೆಯುತ್ತಾನೆ, "ಸಹೋದರರೇ ಒಬ್ಬರನ್ನೊಬ್ಬರು ನಿಂದಿಸಬೇಡಿರಿ" (ಯಾಕೋಬ 4:11).

ನಾವು ಬೇರೆಯವರ ಬಗ್ಗೆ, ವಿಶೇಷವಾಗಿ ನಮ್ಮ ಜೊತೆ ಕ್ರೈಸ್ತರ ಕುರಿತು ಮಾತಾಡುವದಕ್ಕೆ ಮುಂಚೆ, ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳೋಣ:

"ಅದು ಸತ್ಯವೋ?"
"ಅದು ದಯೆಯಿಂದ ಕೂಡಿದ್ದೋ?"

“ನಾನು ಇದನ್ನು ಪುನರಾವರ್ತಿಸುವದಕ್ಕೆ ಬಯಸುವೆನೋ?”

“ಇದು ಸಹಾಯಕವೋ ಅಥವಾ ಹಾನಿಕರವೋ?”

“ಇದೇ ರೀತಿಯಲ್ಲಿ ನನ್ನ ವಿಷಯದಲ್ಲಿ ಮಾತಾಡುವಂತೆ ನಾನು ಬೇರೆಯವರನ್ನು ಅನುಮತಿಸುವೆನೋ?”

“ನಾನು ಏನು ಹೇಳಲು ಹೊರಟಿದ್ದೇನೋ ಅದರ ಬಗ್ಗೆ ಯೇಸುವಿನ ಮುಂದೆ ಸಮರ್ಥನೆ ಮಾಡಿಕೊಳ್ಳಬಲ್ಲೆನೋ?”

2. ಒಬ್ಬ ಧೈರ್ಯತುಂಬುವವನಾಗಿರು. ಬೇರೆಯವರಿಗೆ ಧೈರ್ಯತುಂಬುವದಕ್ಕೆ ತುಖಿಕನಿಗಿದ್ದ ಸಾಮರ್ಥ್ಯದ ಕುರಿತು ಅಷ್ಟಾಗಿ ತಿಳಿದು ಬಂದಿರುವದಿಲ್ಲ. ಬೇರೆಯವರಿಗೆ ಧೈರ್ಯತುಂಬುವ ಸಾಮರ್ಥ್ಯವುಳ್ಳ ಕ್ರೈಸ್ತನೊಬ್ಬನಿಗೆ ಬಾರ್ನಬನು ಒಂದು ಉತ್ತಮ ಉದಾಹರಣೆಯಾಗಿದ್ದಾನೆ. ಈ ಕಾರಣದಿಂದಲೇ ಅಪೊಸ್ತಲರು ಆತನನ್ನು “ಧೈರ್ಯದಾಯಕ” ಎಂದು ಕರೆಯುತ್ತಿದ್ದರು (ಅಪೊಸ್ತಲರ ಕೃತ್ಯಗಳು 4:36). ಅಂತಿಯೋಕ್ಯದಲ್ಲಿನ ಸೇವೆಯಲ್ಲಿ ಸಹಾಯಕನಾಗಿರುವಂತೆ ಅಪೊಸ್ತಲರು ಬಾರ್ನಬನನ್ನು ಆರಿಸಿಕೊಂಡ ಬಳಿಕ (ಅಪೊಸ್ತಲರ ಕೃತ್ಯಗಳು 9:27), ಆತನು ಪೌಲನನ್ನು ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದನು. ನಂತರ, ಆತನು ಮಾರ್ಕನನ್ನು ಕರ್ತನಿಗೆ ಒಬ್ಬ ಪ್ರಯೋಜಕನಾದ ಸೇವಕನನ್ನಾಗಿ ಅಭಿವೃದ್ಧಿಗೊಳಿಸಿದನು (2 ತಿಮೊಥೆ 4:11).

3. ಒಬ್ಬ ನಂಬಿಗಸ್ತನಾದ ಜೊತೆ ಕೆಲಸದವನಾಗಿರು. ತುಖಿಕ ಮತ್ತು ಒನೇಸಿಮ ಇಬ್ಬರು ಸೇರಿ ಒಂದು ಉತ್ತಮ ತಂಡವಾಗಿದ್ದರು. ಒನೇಸಿಮನು ಮುಂಚೆ ಒಬ್ಬ ದಾಸನು (ಜೀತದಾಳು) ಆಗಿದ್ದಾಗ್ಯೂ, ಅವರಿಬ್ಬರೂ ಒಟ್ಟಾಗಿ ಕೆಲಸ ಮಾಡಲು ಶಕ್ತರಾಗಿದ್ದರು. ಕ್ರೈಸ್ತರು, ತಮ್ಮ ಹಿನ್ನಲೆಗಳು ಮತ್ತು ಸಮಾಜದಲ್ಲಿನ ಸ್ಥಾನಮಾನಗಳು ಏನೇ ಆಗಿದ್ದಾಗ್ಯೂ ಸರಿಯೇ, ಕರ್ತನಿಗೋಸ್ಕರ ಒಟ್ಟಾಗಿ ಕೆಲಸ ಮಾಡುವದನ್ನು ಕಲಿತುಕೊಳ್ಳಬೇಕು. ಯೇಸು ತನ್ನ ಹಿಂಬಾಲಕರನ್ನು ತನ್ನ ಸಾರೂಪ್ಯವುಳ್ಳವರನ್ನಾಗಿ ರೂಪಾಂತರಗೊಳಿಸಿ ಅವರು ತಮ್ಮ ಜೊತೆ ಕ್ರೈಸ್ತರ ಸಂಗಡ ಸಾಮರಸ್ಯದಿಂದ ಕೆಲಸ ಮಾಡುವಂತೆ ಶಕ್ತರನ್ನಾಗಿಸುವನು.